# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಕೆಂಪೇಗೌಡನಗರ ಉಪವಿಭಾಗ,**
**ಬೃ.ಬೆಂ.ಮ.ಪಾಲಿಕೆ ಹೆಚ್. ಸಿದ್ದಯ್ಯ ರಸ್ತೆ, ಬೆಂಗಳೂರು**

ಸಂಖ್ಯೆ:ಸ.ಇಂ/ವಾ–118/ವಾರ್ಡ್‌ಸಭೆ/2022–23 ದಿನಾಂಕ: 1/7/22

## ವಾರ್ಡ್ –118ರ ವಾರ್ಡ್ ಸಭೆಯ ನಡವಳಿ

ದಿನಾಂಕ:04–07–2022 ರಂದು ಕೆಂಪೇಗೌಡನಗರ ಉಪವಿಭಾಗ ವಾರ್ಡ್–118ರ ವಾರ್ಡ್ ಕಛೇರಿಯಲ್ಲಿ ಡಾ!!. ಮಂಜುನಾಥ್ ಶಿಂಧೆ ಉಪ ನಿರ್ದೇಶಕರು ಪಶುಪಾಲನೆ ವಾರ್ಡ್–118 ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು.

ಹಾಜರಿದವರು:–

| ಕ್ರ ಸಂ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಡಾ!!. ಮಂಜುನಾಥ್ ಶಿಂಧೆ | ನೋಡಲ್ ಅಧಿಕಾರಿಗಳು | 9480685206 |
| 2 | ಶ್ರೀ.ಕೆ.ಎಸ್.ವಿಜಯ್‌ಕುಮಾರ್ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:118 | 9480688118 |
| 3 | ಶ್ರೀ.ಆರ್.ವೀರಯ್ಯ | ಕಿರಿಯ ಆರೋಗ್ಯ ಪರಿವೀಕ್ಷಕರು | 9844859560 |
| 4 | ಶ್ರೀ.ಸಿ.ವಿಜಯನ್ | ಕಂದಾಯ ಪರಿವೀಕ್ಷಕರು | 9902783269 |
| 5 | ಶ್ರೀ. ಕದಿರಪ್ಪ | ಮೌಲಮಾಪಕರು | |

ಮಾನ್ಯ ಅಧ್ಯಕ್ಷರು, ಮೇಲ್ಕಂಡ ಎಲ್ಲರನ್ನು ಸ್ವಾಗತದೊಂದಿಗೆ ಪರಸ್ಪರ ಪರಿಚಯ ಮಾಡಿಕೊಳ್ಳಲು ತಿಳಿಸುತ್ತಾ ಸಭೆಯನ್ನು ಪ್ರಾರಂಭಿಸಲಾಯಿತು.

### ಚರ್ಚಿಸಲಾದ ವಿಷಯಗಳು:–

ಹಿಂದಿನ ಸಭೆಯ ವಿಷಯದ ಬಗ್ಗೆ ಚರ್ಚಿಸಲಾಗಿ ಸಭೆಯನ್ನು ಪ್ರಾರಂಭಿಸಲಾಗಿದ್ದು, ನಂತರದಲ್ಲಿ ಡಾ!! ಮಾನಸ ರವರು ಮಾತನಾಡಿ ಕಳೆದ ಒಂದು ತಿಂಗಳಿನಿಂದ ಯಾವುದೇ ಕೋವಿಡ್ ಪ್ರಕರಣಗಳು ಯಾವುದೂ ದಾಖಲಾಗಿರುವುದಿಲ್ಲ, Dengue screening, Dengue house index, container index, Breteau index, Survery ಯನ್ನು ಮಾಡಲಾಗಿದ್ದು, ಶೇಕಡ 5 ಗಿಂತ ಕಡಿಮೆ ಇರುತ್ತದೆ ಎಂದು ತಿಳಿಸಿರುತ್ತಾರೆ, Eye catarack, blindation contral program ನ್ನು ಮಾಡಲಾಗಿರುತ್ತದೆ ಹಾಗೂ ಕೋವಿಡ್ ಲಸಿಕೆಯನ್ನು ಸೋಮವಾರ ಹಾಗೂ ಬುಧವಾರ ಯು.ಪಿ.ಹೆಚ್.ಎ ಯಲ್ಲಿ ನೀಡಲಾಗಿದ್ದು, ಜೈನ್ ಹೈಟ್ಸ್ ಕಟ್ಟಡದಲ್ಲಿ ಪ್ರತಿ ಭಾನುವಾರ 12 ವರ್ಷ ಮೇಲ್ಪಟ್ಟಿರುವರಿಗೆ ಲಸಿಕೆಯನ್ನು ನೀಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಘನತ್ಯಾಜ್ಯ ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಮಾತನಾಡಿ ದಿನಾಂಕ: 01-07-2022 ರಿಂದ ಪೌರಕಾರ್ಮಿಕರ ಮುಷ್ಕರ ಮಾಡುತ್ತಿರುವುದರಿಂದ ಕಸವನ್ನು ರಸ್ತೆಯಲ್ಲಿ ಗುಡಿಸುತ್ತಿರುವುದಿಲ್ಲ ಆದರೆ ಬಾಗಿಲಿನಿಂದ ಬಾಗಿಲಿಗೆ ಕಸವನ್ನು ಸಂಗ್ರಹಿಸಲಾಗಿರುತ್ತದೆ. ಎಲ್ಲಾ Black spot ಗಳನ್ನು ತೆರವುಗೊಳಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಹಾಗೂ ವಾರ್ಡ್ ಸಂಖ್ಯೆ: 118ರಲ್ಲಿ ಹಲವು ಕಡೆ ಸ್ವಚ್ಛಗೊಳಿಸಿ ಬ್ಲಿಚಿಂಗ್ ಪೌಡರ್ ಅಳವಡಿಸಿದ್ದರೂ ಸಹ ನಂತರದ ಸಮಯದಲ್ಲಿ ಸ್ಥಳೀಯರು ಕಸವನ್ನು ಪುನಃ ಹಾಕುತ್ತಾರೆ ಎಂದು ತಿಳಿಸಿರುತ್ತಾರೆ. ಹಾಗೂ ಮರಕುಂಬೆಗಳನ್ನು ಕತ್ತಿರಿಸುವ ಯಂತ್ರವನ್ನು ಇಲಾಖೆ ವತಿಯಿಂದ ನೀಡಿರುವುದಿಲ್ಲವೆಂದು ಸಭೆಯಲ್ಲಿ ತಿಳಿಸಿರುತ್ತಾರೆ. ಸ್ಥಳೀಯರು ಮಾತನಾಡಿ power spraying, fogging ಕೆಲಸವು ಸರಿಯಾಗಿ ಕಾರ್ಯನಿರ್ವಹಿಸುತ್ತಿರುವುದಿಲ್ಲವೆಂದು ತಿಳಿಸಿರುತ್ತಾರೆ. ಬೆಸ್ಕಾಂ ಇಲಾಖೆ ವತಿಯಿಂದ ಜೆ.ಸಿ. ರಸ್ತೆ, ಲಾಲ್‌ಬಾಗ್ ಹಾಗೂ ಪೂರ್ಣಿಮ ಚಿತ್ರಮಂದಿರ ಹತ್ತಿರ ಮರಕುಂಬೆಗಳನ್ನು ಕತ್ತರಿಸಿ ಹಾಗೆಯೇ ಬಿಟ್ಟಿರುತ್ತಾರೆ.ಆದರೆ ಈ ವಿಷಯವಾಗಿ ಮೌಖಿಕವಾಗಿ ತೆರವುಗೊಳಿಸುವಂತೆ ತಿಳಿಸಿದ್ದರೂ ಇದುವರೆಗೂ ತೆರವುಗೊಳಿಸಿರುವುದಿಲ್ಲ ಎಂದು ಸಭೆಯಲ್ಲಿ ತಿಳಿಸಿರುತ್ತಾರೆ.

ಪ್ರತಿ 1ನೇ ಹಾಗೂ 3ನೇ ಶನಿವಾರದೆಂದು ಒಂದೇ ಸಮಯದಲ್ಲಿ ದಕ್ಷಿಣ ವಲಯದ ಎಲ್ಲಾ ವಾರ್ಡ್‌ಗಳಲ್ಲಿ ವಾರ್ಡ್ ಸಮಿತಿ ಸಭೆಗಳನ್ನು ನಡೆಸುತ್ತಿರುವುದರಿಂದ ಬೇರೆ ಇಲಾಖೆ ಹಾಗೂ ಬಿಬಿಎಂಪಿ ಅಧಿಕಾರಿಗಳಿಗೆ ಸಭೆ ಹಾಜರಾಗಲು ಸಾಧ್ಯವಾಗದ ಕಾರಣ ಸಭೆಯ ವಾರ ಹಾಗೂ ಸಮಯದಲ್ಲಿ ಬದಲಾಯಿಸಬೇಕೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಸಾರ್ವಜನಿಕರಿಂದ ಯಾವುದೇ ದೂರುಗಳು ಈ ಸಭೆಯಲ್ಲಿ ಬಂದಿರುವುದಿಲ್ಲ.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಮಳೆ ಹೆಚ್ಚಾಗಿರುವುದರಿಂದ ದೂರುಗಳನ್ನು ಕೂಡಲೇ ಸ್ಪಂದಿಸಬೇಕೆಂದು ತಿಳಿಸಿರುತ್ತಾರೆ ಹಾಗೂ ಮುಂದಿನ ಸಭೆಗೆ ಕಡ್ಡಾಯವಾಗಿ ಎಲ್ಲಾ ಅಧಿಕಾರಿಗಳಿಗೆ ವಾರ್ಡ್ ಸಮಿತಿ ಸಭೆಗೆ ಸಮಯಕ್ಕೆ ಸರಿಯಾಗಿ ಹಾಜರಾಗುವಂತೆ ಸೂಚಿಸಿ, ತಪ್ಪಿದಲ್ಲಿ ಹಾಜರಾಗದ ಅಧಿಕಾರಿಗಳಿಗೆ ನೋಟೀಸ್ ಜಾರಿ ಮಾಡಲು ತಿಳಿಸಿರುತ್ತಾರೆ. ಹಾಜರಿದ್ದ ಅಧಿಕಾರಿಗಳಿಗೆ ಸಮನ್ವಯ ಸಾಧಿಸಿಕೊಂಡು ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಸಹಕಾರ ನೀಡುವಂತೆ ಕೋರುತ್ತಾ, ಸಭೆಗೆ ಹಾಜರಿದ್ದ ಎಲ್ಲಾರಿಗೂ ವಂದನೆಗಳನ್ನು ಅರ್ಪಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ -118 ಸುಧಾಮನಗರ

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 118